## ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ:ಪಿಎಸ್‌ಸಿ 08 ಇ(1)2023–24

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ "
ಬೆಂಗಳೂರು, ದಿನಾಂಕ:17–04–2023

ಇವರಿಂದ:

ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ"
ಬೆಂಗಳೂರು–560001.

ಇವರಿಗೆ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ(ಸೇವೆಗಳು),
ಬಹುಮಹಡಿಗಳ ಕಟ್ಟಡ, ಬೆಂಗಳೂರು–560001.

18/4/2023
ಸ್ವೀಕೃತಿ ಮತ್ತು ರವಾನೆ ಸಹಾಯಕರು
ಅರಣ್ಯ, ... ಇಲಾಖೆ
(ಸ್ವೀಕೃತಿ ಮತ್ತು ... ಸಮನ್ವಯ) ಶಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು-1
12:52PM

ಮಾನ್ಯರೇ,

ವಿಷಯ: ಅರಣ್ಯ ಇಲಾಖೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಹುದ್ದೆಯನ್ನು ತುಂಬುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಎಫ್‌ಇಇ 15 ಎಫ್‌ಇಜಿ 2019(ಇ), ದಿನಾಂಕ:15–03–2023

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಉಲ್ಲೇಖಿತ ಪತ್ರದಲ್ಲಿ ಅರಣ್ಯ ಇಲಾಖೆಯ ಗ್ರೂಪ್–ಎ ವೃಂದದ ಕಿರಿಯ ಶ್ರೇಣಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ನೇರನೇಮಕಾತಿಯ ಮೌಖಿಕ ಸಂದರ್ಶನಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿವರವಾದ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲವಾದ್ದರಿಂದ ಮೌಖಿಕ ಸಂದರ್ಶನಕ್ಕಾಗಿ ಒಟ್ಟು 04 (ನಾಲ್ಕು ಮಂದಿ) ಸದಸ್ಯರನ್ನೊಳಗೊಂಡಂತೆ ಈ ಮುಂದಿನಂತೆ ಸಮಿತಿಯನ್ನು ರಚಿಸಿ ಕ್ರಮವಹಿಸಲು ಆಯೋಗವನ್ನು ಕೋರಲಾಗಿರುತ್ತದೆ.

1. ಕರ್ನಾಟಕ ಲೋಕಸೇವಾ ಆಯೋಗದ ಒಬ್ಬರು ಸದಸ್ಯರು
2. ಕರ್ನಾಟಕ ಸರ್ಕಾರದಲ್ಲಿ ಪ್ರಧಾನ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ಒಬ್ಬರು ಅಖಿಲ ಭಾರತ ಸೇವೆಗೆ ಸೇರಿದ ನಿವೃತ್ತ ಭಾರತೀಯ ಆಡಳಿತ ಸೇವೆ ಅಧಿಕಾರಿ ಅಥವಾ ನಿವೃತ್ತ ಪೊಲೀಸ್ ಸೇವೆ ಅಧಿಕಾರಿ(Retired IAS/IPS officer not below the Rank of Principal Secretary to Government)
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರ ಹುದ್ದೆಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ಒಬ್ಬ ನಿವೃತ್ತ ಭಾರತೀಯ ಸೇವೆ ಅಧಿಕಾರಿ(Retired IFS officer not below the Rank of Principal Chief Conservator of Forests)

–2–

4. ವಿಶ್ವವಿದ್ಯಾಲಯದ ಪ್ರೊಫೆಸರ್ ಹುದ್ದೆಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸುತ್ತಿರುವ ಒಬ್ಬ ಸಂಬಂಧಿಸಿದ ವಿಷಯದ ತಜ್ಞರು(Subject expert not below the Rank of Professor)

ಮೇಲೆ ನಮೂದಿಸಿರುವ ಅಂಶಗಳು ಆಯೋಗದ ಕಾರ್ಯ ವೈಖರಿಯಲ್ಲಿ ಬದಲಾವಣೆ ಮಾಡುವಂತೆ ಆಯೋಗಕ್ಕೆ ನಿರ್ದೇಶನ ನೀಡಿರುವಂತೆ ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಇದು ಆಯೋಗಕ್ಕೆ ನೀಡಲಾದ ಸಾಂವಿಧಾನಿಕ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸಂವಿಧಾನದ 320ನೇ ವಿಧಿಯಲ್ಲಿ ತಿಳಿಸಿರುವ ಸ್ವಾಯತ್ತತೆಯ ಸ್ಪಷ್ಟ ಉಲ್ಲಂಘನೆಯೆಂದು ಭಾವಿಸಿರುವ ಆಯೋಗವು ಈ ವಿಷಯದ ಬಗ್ಗೆ ದಿನಾಂಕ:13-04-2023ರ ಸಭೆಯಲ್ಲಿ ಚರ್ಚಿಸಿ ನಿರ್ಣಯ ಅಂಗೀಕರಿಸಿದ್ದು, ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರಲು ಸೂಚಿಸಿರುತ್ತದೆ.

1. ಸಂವಿಧಾನದ 320(3)(ಎ)ರಡಿ ನಾಗರಿಕ ಸೇವೆಗಳ ಆಯ್ಕೆ ವಿಧಾನ (Method of recruitment) ನಿಯಮಗಳ ಬದಲಾವಣೆ ಇದ್ದಲ್ಲಿ ರಾಜ್ಯ ಸರ್ಕಾರವು ಆಯೋಗದೊಂದಿಗೆ ಸಮಾಲೋಚಿಸಬೇಕೆಂಬ ನಿಬಂಧನೆ ಇದೆ. ಅದರ ಉದ್ಧೃತ ಭಾಗ ಕೆಳಕಂಡಂತಿದೆ:

   "320. Functions of Public service Commissions:

   (3) The Union Public Service Commission or the State Public Service Commission, as the case may be, shall be consulted
      (a) On all matters relating to methods of recruitment to civil services and for civil posts"

2. ಈ ಹುದ್ದೆಗಳಿಗೆ ಅಧಿಸೂಚನೆ ಜಾರಿ ಮಾಡುವಾಗ ಅಸ್ತಿತ್ವದಲ್ಲಿದ್ದ ಸದರಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಅಧಿಸೂಚನೆ ಜಾರಿ ಮಾಡಲಾಗಿದೆ. ಅದನ್ನು ಈ ಹಂತದಲ್ಲಿ ಬದಲಾವಣೆ ಮಾಡುವುದು ನಿಯಮಗಳ ಉಲ್ಲಂಘನೆಯಾಗುತ್ತದೆ.

3. ಸಂದರ್ಶನ ವಿಧಾನವನ್ನು ಮಾರ್ಪಡಿಸುವ ಬಗ್ಗೆ ಸರ್ಕಾರ/ಇಲಾಖೆಯವರು ನಿಯಮ ಪ್ರಕಾರ ಆಯೋಗದ ಅಭಿಪ್ರಾಯ ಕೇಳಿರುವುದಿಲ್ಲ. ಅಲ್ಲದೇ, ಸಂದರ್ಶನ ವಿಧಾನವನ್ನು ಮಾರ್ಪಡಿಸುವಂತೆ ತಿಳಿಸಿ ಒಂದು ಪತ್ರವನ್ನು ನೀಡಲಾಗಿದೆ. ಆದರೆ, ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಧಿಸೂಚನೆ ಜಾರಿ ಪೂರ್ವಭಾವಿ ಪರೀಕ್ಷೆ ಮತ್ತು ಮುಖ್ಯಪರೀಕ್ಷೆಗಳನ್ನು ನಡೆಸಲಾಗಿದ್ದು, ನೇಮಕಾತಿ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ. ಈ ಹಂತದಲ್ಲಿ ಬದಲಾವಣೆಯನ್ನು ಅಳವಡಿಸಿಕೊಳ್ಳುವುದು ಅಧಿಸೂಚನೆಗೆ ವಿರುದ್ಧವಾದ ಕ್ರಮವಾಗುತ್ತದೆ. ಆದ್ದರಿಂದ ಈ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಆಯೋಗಕ್ಕೆ ಸಾಧ್ಯವಿರುವುದಿಲ್ಲ.

ಆದ್ದರಿಂದ, ಉಲ್ಲೇಖಿತ ಪತ್ರ ದಿನಾಂಕ:15-03-2023ನ್ನು ಹಿಂಪಡೆಯುವಂತೆ ತಮ್ಮನ್ನು ಕೋರಲು ಆಯೋಗದಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ.

ತಮ್ಮ ವಿಶ್ವಾಸಿ,

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ

O/C

# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 09 ಇ(1)/2023-24

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ:17-04-2023.

ಇವರಿಂದ:-

ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ",
ಬೆಂಗಳೂರು-560001.

ಇವರಿಗೆ:-

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು),
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

18/4/23
ಸ್ವೀಕೃತಿ ಮತ್ತು ರವಾನೆ ಸಹಾಯಕರು
ಅರಣ್ಯ, ಜೀವಿಪರಿಸ್ಥಿತಿ ... ಶಾಖೆ
(ಸ್ವೀಕೃತಿ ಮತ್ತು ರವಾನೆ ...)
ಬಹುಮಹಡಿಗಳ ಕಟ್ಟಡ, ಬೆಂಗಳೂರು-1
12:08PM

ಮಾನ್ಯರೆ,

**ವಿಷಯ:** ಕರ್ನಾಟಕ ರಾಜ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯಲ್ಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ಸಮಿತಿಯ ರಚನೆ ಹಾಗೂ ಪ್ರಕ್ರಿಯೆ ಕುರಿತು.

**ಉಲ್ಲೇಖ:** 1. ತಮ್ಮ ಪತ್ರ ಸಂಖ್ಯೆ:ಎಫ್‌ಇಇ 15 ಎಫ್‌ಇಜಿ 2019 (ಇ), ದಿನಾಂಕ:15-03-2023.
2. ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 08 ಇ(1)/2023-24, ದಿನಾಂಕ:17-04-2023.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಪತ್ರದಲ್ಲಿ ಅರಣ್ಯ ಇಲಾಖೆಯಲ್ಲಿನ ಗ್ರೂಪ್ 'ಎ' ವೃಂದದ ಕಿರಿಯ ಶ್ರೇಣಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ನೇರ ನೇಮಕಾತಿಯ ಮೌಖಿಕ ಸಂದರ್ಶನಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿವರವಾದ ಮಾನದಂಡಗಳನ್ನು ನಿಗದಿಪಡಿಸಿರುವುದಿಲ್ಲವಾದ್ದರಿಂದ ಮೌಖಿಕ ಸಂದರ್ಶನಕ್ಕಾಗಿ ಒಟ್ಟು 04 (ನಾಲ್ಕು ಮಂದಿ) ಸದಸ್ಯರನ್ನೊಳಗೊಂಡಂತೆ ಈ ಮುಂದಿನಂತೆ ಸಮಿತಿಯನ್ನು ರಚಿಸಿ ಕ್ರಮವಹಿಸಲು ಆಯೋಗವನ್ನು ಕೋರಲಾಗಿರುತ್ತದೆ.

1. ಕರ್ನಾಟಕ ಲೋಕಸೇವಾ ಆಯೋಗದ ಒಬ್ಬರು ಸದಸ್ಯರು.
2. ಕರ್ನಾಟಕ ಸರ್ಕಾರದಲ್ಲಿ ಪ್ರಧಾನ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ಒಬ್ಬರು ಅಖಿಲ ಭಾರತ ಸೇವೆಗೆ ಸೇರಿದ ನಿವೃತ್ತ ಭಾರತೀಯ ಆಡಳಿತ ಸೇವೆ ಅಧಿಕಾರಿ ಅಥವಾ ನಿವೃತ್ತ ಭಾರತೀಯ ಪೊಲೀಸ್ ಸೇವೆ ಅಧಿಕಾರಿ (retired IAS/IPS officer not below the rank of Principal Secretary to Government).

3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರ ಹುದ್ದೆಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ಒಬ್ಬ ನಿವೃತ್ತ ಭಾರತೀಯ ಅರಣ್ಯ ಸೇವೆ ಅಧಿಕಾರಿ (retired IFS officer not below the rank of Principal Chief Conservator Of Forests).
4. ವಿಶ್ವವಿದ್ಯಾಲಯದ ಪ್ರೊಫೆಸರ್ ಹುದ್ದೆಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸುತ್ತಿರುವ ಒಬ್ಬ ಸಂಬಂಧಿಸಿದ ವಿಷಯ ತಜ್ಞರು (subject expert not below the rank of Professor)".

ಕರ್ನಾಟಕ ರಾಜ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯಲ್ಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗ್ರೂಪ್ 'ಎ' ವೃಂದದ ಹುದ್ದೆಗಳಿಗೆ ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) ನಿಯಮಗಳು 2003, ದಿನಾಂಕ:04-08-2003ರ ಮತ್ತು ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2012, ದಿನಾಂಕ:06-09-2012ರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇಮಕಾತಿ ಪ್ರಕ್ರಿಯೆಯನ್ನು ಜರುಗಿಸಲಾಗುತ್ತಿದೆ. ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2012, ದಿನಾಂಕ:06-09-2012ರ ನಿಯಮಗಳಲ್ಲಿ ಸಂದರ್ಶನದ ಕುರಿತು ಈ ಕೆಳಗಿನಂತೆ ತಿಳಿಸಲಾಗಿದೆ:-

" <u>Method of Recruitment</u>:

The qualified candidates shall be called for an interview separately by the KPSC. There shall be twenty marks for the Interview."

ಉಲ್ಲೇಖಿತ (1)ರ ಪತ್ರಕ್ಕೆ ಆಯೋಗದ ದಿನಾಂಕ:13-04-2023ರ ಸಭೆಯಲ್ಲಿ ಚರ್ಚಿಸಿದಂತೆ ದಿನಾಂಕ:17-04-2023ರ ಪತ್ರದಲ್ಲಿ ಆಯೋಗದ ನಿರ್ಣಯವನ್ನು ತಿಳಿಸಲಾಗಿರುತ್ತದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಂದರ್ಶನ ಸಮಿತಿಯ ರಚನೆ ಹಾಗೂ ಸಂದರ್ಶನ ಪ್ರಕ್ರಿಯೆಯ ಇತರೆ ವಿಷಯಗಳ ಕುರಿತು ಯಾವುದೇ ವಿವರವಾದ ಮಾನದಂಡಗಳನ್ನು ಈವರೆಗೂ ನಿಗದಿಪಡಿಸಿರಲಿಲ್ಲ. ಸದರಿ ನಿಯಮಗಳಲ್ಲಿ ಪೂರ್ವಭಾವಿ, ಮುಖ್ಯ ಮತ್ತು ದೈಹಿಕ ಸಹಿಷ್ಣುತೆ ಹಾಗೂ ವೈದ್ಯಕೀಯ ಅರ್ಹತಾ ಪರೀಕ್ಷೆಗಳ ಕುರಿತು ಮಾತ್ರ ಮಾನದಂಡಗಳನ್ನು ನಿಗದಿಪಡಿಸಿದ್ದು, ಪ್ರಸ್ತುತ ಸಂದರ್ಶನಕ್ಕೆ ಸದಸ್ಯರ ಸಮಿತಿಯನ್ನು ರಚಿಸಿ ಮಾನದಂಡಗಳನ್ನು ನಿಗದಿಪಡಿಸಿ ಆದೇಶಿಸಿರುವುದು ಸ್ವಾಗತಾರ್ಹ ವಿಷಯವಾಗಿದೆ.

ಅಂತೆಯೇ, ಆಯೋಗವು ನಡೆಸುವ ವಿವಿಧ ನೇಮಕಾತಿಗಳಲ್ಲಿ ಹಲವಾರು ರಚನಾತ್ಮಕ ಹೊಸ ಅಂಶಗಳನ್ನು ನೇಮಕಾತಿ ಪ್ರಕ್ರಿಯೆಗಳಲ್ಲಿ ಅಳವಡಿಸಿಕೊಳ್ಳಲು ಮತ್ತು ನೇಮಕಾತಿಯನ್ನು ಪಾರದರ್ಶಕವಾಗಿ ನಡೆಸಲು ಸರ್ಕಾರ ಹೊರಡಿಸಿದ ಆದೇಶಗಳನ್ನು ಅಧಿಸೂಚನೆ ಹೊರಡಿಸಿದ ನಂತರವೂ ನೇಮಕಾತಿಯ ವಿವಿಧ ಹಂತಗಳಲ್ಲಿ ಅಳವಡಿಸಿಕೊಂಡು ನೇಮಕಾತಿಯನ್ನು ಪೂರ್ಣಗೊಳಿಸಿರುವ ಹಲವಾರು ಉದಾಹರಣೆಗಳು ಇರುತ್ತದೆ. ಪ್ರಸ್ತುತ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ 16 ಹುದ್ದೆಗಳ ಅಧಿಸೂಚನೆಯನ್ನು ಆಯೋಗವು ದಿನಾಂಕ:13-10-2020ರಂದು ಹೊರಡಿಸಲಾಗಿದ್ದು, ಮುಖ್ಯ ಪರೀಕ್ಷೆಯನ್ನು ನಡೆಸಿ, ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾಗುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದ್ದಾಗ್ಯೂ ಸಹ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವ ಅಂಶಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ.

....3

ಮುಂದುವರೆಸುತ್ತಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸಂದರ್ಶನ ಸಮಿತಿ ರಚನೆಯ ಕುರಿತು ಯಾವುದೇ ಪ್ರಸ್ತಾಪ ಇರುವುದಿಲ್ಲ. ಆದರೆ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2020ರಲ್ಲಿ ಸಂದರ್ಶನ ಸಮಿತಿ ರಚನೆಯ ಕುರಿತು ಇರುವ ಮಾನದಂಡದ ಉದ್ಧೃತ ಭಾಗ ಕೆಳಕಂಡಂತೆ ಇರುತ್ತದೆ.

**"ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಯನ್ನು ಆಯ್ಕೆ ಪ್ರಾಧಿಕಾರದ ಅಧ್ಯಕ್ಷರಿಂದ ರಚಿಸಲಾದ ನಾಲ್ಕು (04) ವ್ಯಕ್ತಿಗಳನ್ನು ಒಳಗೊಂಡ ಸಂದರ್ಶನ ಮಂಡಳಿಯಿಂದ ಸಂದರ್ಶಿಸತಕ್ಕದ್ದು. ಈ ಪೈಕಿ ಇಬ್ಬರು ವ್ಯಕ್ತಿಗಳಿಗಿಂತ ಹೆಚ್ಚು ಆಯ್ಕೆ ಪ್ರಾಧಿಕಾರದ ಸದಸ್ಯರುಗಳು ಇರತಕ್ಕದ್ದಲ್ಲ"**

ಈ ಮೇಲಿನ ನಿಯಮಗಳಲ್ಲಿ ಆಯ್ಕೆ ಪ್ರಾಧಿಕಾರದ ವತಿಯಿಂದ ಸಂದರ್ಶನ ಮಂಡಳಿಗೆ ಸದಸ್ಯರಾಗಬಹುದಾದವರ ಸಂಖ್ಯೆ ಗರಿಷ್ಠ ಇಬ್ಬರು ಎಂದಿರುತ್ತದೆ. ಆದ್ದರಿಂದ ಕನಿಷ್ಠ ಓರ್ವ ಸದಸ್ಯರು ಸಹ ಸಂದರ್ಶನ ಸಮಿತಿಯಲ್ಲಿ ಸದಸ್ಯರಾಗಬಹುದಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಉಲ್ಲೇಖಿತ (1)ರ ಪತ್ರದಲ್ಲಿ ಆಯೋಗದ ಪರವಾಗಿ ಒಬ್ಬರನ್ನು ಸಂದರ್ಶನ ಸಮಿತಿಯ ಸದಸ್ಯರನ್ನಾಗಿ ನೇಮಿಸಲು ಸೂಚಿಸಿರುವ ಅಂಶವು ಹೊಸದೇನಾಗಿರುವುದಿಲ್ಲ ಮತ್ತು ಇದರಲ್ಲಿ ಯಾವುದೇ ಪ್ರಮುಖ ವ್ಯತ್ಯಾಸಗಳಿರುವುದಿಲ್ಲ.

ಒಂದು ವೇಳೆ ನಿಯಮಗಳಲ್ಲಿ ಸಂದರ್ಶನ ಸಮಿತಿ ರಚನೆಯ ಕುರಿತು ಪ್ರಸ್ತಾಪ ಇದ್ದಲ್ಲಿ, ಸಂದರ್ಶನ ಪ್ರಕ್ರಿಯೆಯ ವಿಧಾನವನ್ನು ಸುಧಾರಿಸುವ ನಿಟ್ಟಿನಲ್ಲಿ ಮತ್ತು ಸದರಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಲು ಹಾಗೂ ಅನಿಯಂತ್ರತೆಯನ್ನು ಹೋಗಲಾಡಿಸಲು ನೇಮಕಾತಿ ಪ್ರಾಧಿಕಾರವು ಕೆಲವು ನಿರ್ದೇಶನಗಳನ್ನು ಅಳವಡಿಸಿಕೊಳ್ಳಲು ಸೂಚಿಸಿರುತ್ತದೆ. ಆಯೋಗವು ಆಯ್ಕೆ ಪ್ರಾಧಿಕಾರವಾಗಿರುವ ಹಿನ್ನೆಲೆಯಲ್ಲಿ ನೇಮಕಾತಿ ಪ್ರಾಧಿಕಾರವು ನೀಡಿರುವ ನಿರ್ದೇಶನಗಳನ್ನು ಸಾಧ್ಯವಾದಷ್ಟು ನ್ಯಾಯ ಸಮ್ಮತವಾದ ರೀತಿಯಲ್ಲಿ ಕಾರ್ಯಗತಗೊಳಿಸಬೇಕಿರುತ್ತದೆ.

ಪ್ರಸ್ತುತ ಸರ್ಕಾರವು ರಚಿಸಿರುವ ಸಂದರ್ಶನ ಸಮಿತಿಯಲ್ಲಿ ಅರಣ್ಯ ಸಂರಕ್ಷಣೆಯ ಕುರಿತು ಆಡಳಿತಾತ್ಮಕ ಅನುಭವ ಮತ್ತು ವಿಷಯ ಪರಿಣಿತಿ ಹಾಗೂ ಜ್ಞಾನ ಹೊಂದಿರುವ ಹಿರಿಯ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಿರುವುದರಿಂದ ಸದರಿ ಹುದ್ದೆಯ ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಅರಣ್ಯ ಸಂರಕ್ಷಣೆಯ ಕುರಿತು ಎಲ್ಲಾ ರೀತಿಯಿಂದಲೂ ಅರ್ಹರಿರುವರೇ ಎಂಬ ನಿಟ್ಟಿನಲ್ಲಿ ಅವರ ಮನೋಸಾಮರ್ಥ್ಯ, ದೃಷ್ಟಿಕೋನ ಹಾಗೂ ವ್ಯಕ್ತಿತ್ವವನ್ನು ಪರೀಕ್ಷಿಸಿ, ಅರಣ್ಯ ಸೇವೆಗೆ ಅರ್ಹ ಮತ್ತು ದಕ್ಷ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುತ್ತದೆ.

ಮುಂದುವರೆದು, ಭಾರತದ ಸಂವಿಧಾನದ ಅನುಚ್ಛೇದ 320 (3) (a)ರ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆ.

***"320. Functions of Public Service Commissions***

***(3) The Union Public Service Commission or the State Public Service Commission, as the case may be, shall be consulted***

***(a) on all matters relating to methods of recruitment to civil services and for civil posts;"***

ಈ ಮೇಲ್ಕಂಡ ನಿಯಮಾನುಸಾರ ಉಲ್ಲೇಖಿತ ಪತ್ರದಲ್ಲಿನ ಆದೇಶವನ್ನು ಹೊರಡಿಸುವ ಮುನ್ನ ಆಯೋಗದ ಅಭಿಪ್ರಾಯವನ್ನು ಕೋರುವುದು ಅವಶ್ಯಕವಾಗಿರುತ್ತದೆ. ಆದರೆ ಉಲ್ಲೇಖಿತ (1)ರ ಪತ್ರದಲ್ಲಿ ವ್ಯಕ್ತಿತ್ವ ಪರೀಕ್ಷೆಯನ್ನು ತೆಗೆದು ಹಾಕಿರುವುದಿಲ್ಲ ಬದಲಾಗಿ ಸಂದರ್ಶನ ಸಮಿತಿಯ ಸಾಂಸ್ಥಿಕ ರಚನೆಯನ್ನು ಮಾತ್ರ ರೂಪಿಸಲಾಗಿರುತ್ತದೆ. ಇದು ಪಾರದರ್ಶಕ ಮತ್ತು ಮುಕ್ತ ವ್ಯವಸ್ಥೆಗೆ ಅನುವು ಮಾಡಿಕೊಡುವುದರಿಂದ ಸಂವಿಧಾನದ ಮೇಲ್ಕಂಡ ಅನುಚ್ಛೇದಕ್ಕೆ ವ್ಯತಿರಿಕ್ತವಾದಂತೆ ಆಗುವುದಿಲ್ಲ.

ಇದಲ್ಲದೆ, ಆಯೋಗವು ನಡೆಸುತ್ತಿರುವ ವಿವಿಧ ನೇಮಕಾತಿಗಳ ವ್ಯಕ್ತಿತ್ವ ಪರೀಕ್ಷೆಗಳ ಕುರಿತು ಸಾರ್ವಜನಿಕ ವಲಯದಲ್ಲಿ ಅಪನಿಂದನೆ ಹಾಗೂ ಅಸಮಾಧಾನ ವ್ಯಕ್ತವಾಗುತ್ತಿದ್ದು, ಅದನ್ನು ಹೋಗಲಾಡಿಸಲು ಉಲ್ಲೇಖಿತ ಪತ್ರದಲ್ಲಿನ ಅಂಶಗಳಂತಹ ಸುಧಾರಣಾ ಕ್ರಮಗಳನ್ನು ಜಾರಿಗೆ ತರಲು ಪ್ರಸ್ತಾವನೆಯನ್ನು ಆಯೋಗವೇ ಖುದ್ದಾಗಿ ಸಲ್ಲಿಸಬೇಕಿತ್ತು. ಆದರೆ ಸರ್ಕಾರವೇ ಈ ಕುರಿತಂತೆ ಜಾರಿಗೊಳಿಸಿರುವ ಅಂಶವು ಶ್ಲಾಘನೀಯವಾಗಿರುವುದಲ್ಲದೆ, ಅಭ್ಯರ್ಥಿಗಳು/ಆಕಾಂಕ್ಷಿಗಳಿಂದ ಈ ಕುರಿತು ಸಕಾರಾತ್ಮಕ ಪ್ರಕ್ರಿಯೆಯನ್ನು ವ್ಯಕ್ತಪಡಿಸುತ್ತಿರುವುದು ಕಂಡು ಬಂದಿರುತ್ತದೆ.

ಸರ್ಕಾರದ ಉಲ್ಲೇಖಿತ ಪತ್ರವು ಸದರಿ ಇಲಾಖೆಯ ಉಸ್ತುವಾರಿಯಾದ ಮಾನ್ಯ ಮುಖ್ಯಮಂತ್ರಿಯವರಿಂದಲೇ ಅನುಮೋದನೆಯಾಗಿರುವುದರಿಂದ ಸರ್ಕಾರದ ಆದೇಶಕ್ಕೆ ಸಮಾನವಾಗಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ:15-03-2023ರ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಸಂದರ್ಶನ ಸಮಿತಿಯ ರಚನೆಯ ಮಾನದಂಡಗಳನ್ನು ಅಳವಡಿಸಿಕೊಂಡಲ್ಲಿ ಆಯೋಗವು ಪಾರದರ್ಶಕವಾಗಿ, ನ್ಯಾಯಯುತವಾಗಿ, ಮುಕ್ತವಾಗಿ ಮತ್ತು ಅನಿಯಂತ್ರತೆರಹಿತ ಸಂದರ್ಶನವನ್ನು ನಡೆಸಿ ಪ್ರತಿಭಾನ್ವಿತ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಸಫಲತೆಯನ್ನು ಹೊಂದಬಹುದು ಹಾಗೂ ಎಂಬ ನನ್ನ ಅಭಿಪ್ರಾಯವನ್ನು ತಮ್ಮ ಆದ್ಯ ಗಮನಕ್ಕೆ ತರಬಯಸುತ್ತಾ, ಉಲ್ಲೇಖಿತ (1)ರ ಪತ್ರದಲ್ಲಿ ನಮೂದಿಸಿರುವ ಸಂದರ್ಶನ ಸಮಿತಿ ರಚನೆಯ ಮಾನದಂಡಗಳು ಸೂಕ್ತವಾಗಿರುತ್ತವೆ ಎಂದು ತಿಳಿಸುತ್ತಾ, ಸದರಿ ಮಾನದಂಡಗಳನ್ನು ಮುಂದುವರೆಸುವಂತೆ ಕೋರಿದೆ.

ತಮ್ಮ ವಿಶ್ವಾಸಿ,

(ಸುರಳ್ಕರ್ ವಿಕಾಸ್ ಕಿಶೋರ್),
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

o/c